ಡೆವಲಪ್ಮೆಂಟ್ ಆಗುತ್ತಿಲ್ಲ ಎಂದು ಮೇಲಿಂದ ಮೇಲೆ ಹೇಳಬಹುದು. ವಾಟರ್ ಸಪ್ಲೈ ಸಲುವಾಗಿ ಮೊದಲಿನಿಂದಲೂ ಕೇಳುತ್ತಿದ್ದೇವೆ.

ಕಾಡಾ ಪ್ರಾಜೆಕ್ಟ್‌ನಲ್ಲಿ ಬರತಕ್ಕ ವಾಟರ್ ಸಪ್ಲೈ ಕೆಲಸವನ್ನು ರೆಗ್ಯುಲರ್ ಕೆಲಸದಲ್ಲಿ ತೆಗೆದುಕೊಳ್ಳುತ್ತಿಲ್ಲ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಮುಗಿಸಿದ ನಂತರ ನಿಮ್ಮ ಕಡೆಯಿಂದ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದಕಾರಣ ಇವುಗಳನ್ನೆಲ್ಲಾ ಸರ್ಕಾರ ತೆಗೆದುಕೊಳ್ಳಬೇಕು ಕೂಡಲೇ ಮುಳುಗಡೆ ಪ್ರದೇಶದ ಜನರಿಗೆ ಅನುಕೂಲತೆಗಳನ್ನು ಮಾಡಿಕೊಟ್ಟು ಇರಿಗೇಷನ್‌ಗೆ ಹೆಚ್ಚಿಗೆ ಹಣ ಕೊಟ್ಟು ಈ ಕೆಲಸಗಳನ್ನು ಮುಗಿಸಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಸಂತಾಪ ಸೂಚನೆ

ಬೆಂಗಳೂರಿನಲ್ಲಿ ವಾಯುಪಡೆಗೆ ಸೇರಿದ ವಿಮಾನ ಅಪಘಾತದಲ್ಲಿ ಮಡಿದವರ ಬಗ್ಗೆ

+ ಶ್ರೀ ಎಸ್. ಬಂಗಾರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಅಪಘಾತದ ಬಗ್ಗೆ ವಿಷ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು: ಹೇಳಿ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರಿನಲ್ಲಿ ಮತ್ತೊಂದು ವಿಮಾನ ಅಪಘಾತ ದುರಂತ ಈ ದಿನ ಬೆಳಿಗ್ಗೆ ಸುಮಾರು 8 ಘಂಟೆ 10 ನಿಮಿಷದ ಹೊತ್ತಿನಲ್ಲಿ ಯಲಹಂಕ ಏರ್‌ಫೋರ್ಸ್‌ಗೆ ಸೇರಿರತಕ್ಕ ವಿಮಾನ ನಿಲ್ದಾಣದಲ್ಲಿ ಇದು ಆಗಿದೆ. ಈ ವಿಚಾರ ಗೊತ್ತಾದ ಕೂಡಲೇ ಸದನದಲ್ಲಿ ತಮ್ಮ ಅಪ್ಪಣೆ ಪಡೆದು ನಾನು ವಿರೋಧಪಕ್ಷದ ನಾಯಕರಾದ ಶ್ರೀ ಮಾನ್ ಚಂದ್ರೇಗೌಡರು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮತ್ತು ಶಾಸಕ ಮಿತ್ರರಾದ ಮಾಲೀಕಯ್ಯ ಗುತ್ತೇದಾರ್ ಅವರು ಗೃಹಸಚಿವರಾದ ಧರ್ಮಸಿಂಗ್ ನಾವೆಲ್ಲ ಸೇರಿ ಅಲ್ಲಿಗೆ ಹೋಗಿ ಬಂದೆವು ಹೋದಾಗ ವಿವರಗಳನ್ನು ಕೂಡ ಪಡೆದೆವು. ಬೆಳಿಗ್ಗೆ ಮೇಲಕ್ಕೆ ಹಾರಿ ಏರ್ ಬೋರ್ನ್ ಆಗಿ ಅರ್ಧ ನಿಮಿಷವೂ ಕಳೆದಿಲ್ಲ ಆವ್ರೋ ಏರ್‌ಕ್ರಾಫ್ಟ್ ಡಬ್ಬಲ್ ಎಂಜಿನ್ ಅದು ರನ್‌ವೇ ಇದೆಯಲ್ಲ ಅದರಿಂದ ಬಲಗಡೆ ಭಾಗದಲ್ಲಿ ನೂರಾರು ಅಡಿ ದೂರದಲ್ಲಿ ಬಿದ್ದಿದೆ. ಸಂಪೂರ್ಣವಾಗಿ ಭಸ್ಮವಾಗಿದೆ ಕಾರಣಗಳು ಏನು ಎಂಬುದು ತನಿಖೆಗೆ ಸಂಬಂಧಪಟ್ಟಿರತಕ್ಕ ವಿಚಾರ. ಏರ್‌ಫೋರ್ಸ್ ಇಲಾಖೆಗೆ ಸಂಬಂಧಪಟ್ಟ ವಿಚಾರ. ಒಟ್ಟು 28 ಜನ ಮೃತರಾಗಿರುವುದು. ಅದರ ಪಟ್ಟಿಯೂ ಕೂಡ ಅಲ್ಲಿರತಕ್ಕ ಏರ್‌ಫೋರ್ಸ್ ಅಧಿಕಾರಿಗಳು ತೋರಿಸಿದ್ದಾರೆ. ಮೂರು ಜನ ಆಫೀಸರ್ಸ್ ಕೇಡಾರ್‌ನಲ್ಲಿ ಇರತಕ್ಕವರು ಇನ್ನು 25 ಜನ 24 ವರ್ಷದ ಮಕ್ಕಳು ಟೆಕ್ನಿಕಲ್ ಗ್ರಾಜುಯೇಟ್ಸ್. ನಾನು ವಿವರಗಳನ್ನು ನೋಡುವುದಕ್ಕೆ ಹೋಗಲಿಲ್ಲ, ಅವರೆಲ್ಲಾ ಟ್ರೈನೀ ಗ್ರಾಜುಯೇಟ್ ಆಫೀಸರ್ಸ್ ಇದ್ದಾರೆ. ಅಪಘಾತ ಆದತಕ್ಷಣ ಬೆಂಕಿ ಬಿದ್ದು ಬಲಗಡೆ ರೆಕ್ಕೆ ಕಿತ್ತುಕೊಂಡು ಹೋಗಿದೆ. ಮುಂದುಗಡೆ ಏನೂ ಉಳಿದಿಲ್ಲ. ಮುಂದುಗಡೆ ಚೂಪಾಗಿರತಕ್ಕದ್ದು ಬಿಟ್ಟರೆ ಎಲ್ಲಾ ಭಸ್ಮವಾಗಿದೆ. ತಕ್ಷಣ ಏರ್‌ಫೋರ್ಸ್‌ನ ಅಗ್ನಿಶಾಮಕ ದಳದವರು ಮತ್ತು ನಮ್ಮ ರಾಜ್ಯದ ಅಗ್ನಿಶಾಮಕ ದಳದವರು ಅಲ್ಲಿಗೆ ಹೋಗಿದ್ದಾರೆ. ಅವರು ರಾಜ್ಯ ಸರ್ಕಾರದ ಫೈರ್ ಬ್ರಿಗೇಡ್ ಆಪ್ರಿಷಿಯೇಟ್ ಮಾಡಿದರು.

ಡಿ.ಐ.ಜಿ. ರಘುರಾಮನ್ ಅವರ ನೇತೃತ್ವದಲ್ಲಿ ಅಪಘಾತ ನಡೆದ ಸ್ಥಳಕ್ಕೆ ಹೋಗಿ ಸಂಪೂರ್ಣವಾಗಿ ಏನು ತಕ್ಷಣ ಕಾರ್ಯಕ್ರಮ ಹಾಕಬೇಕು ಡೆಡ್ ಬಾಡೀಸ್ ತೆಗೆಯತಕ್ಕ ವಿಚಾರದಲ್ಲಿ ಅದನ್ನು ಮಾಡಿದ್ದಾರೆ. ಜೊತೆಗೆ ಫೈರ್ ಬ್ರಿಗೇಡ್ ಸಿಬ್ಬಂದಿವರ್ಗದವರು ಎಲ್ಲರೂ ಇನ್ನೂ ಕೂಡ ಅಲ್ಲಿದ್ದರು. ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ.

ಎಂಬ ಹೊಗಳಿಕೆಯನ್ನು ಹೇಳುತ್ತಿದ್ದಾರೆ. ಬೆಂಗಳೂರು ವಿಮಾನ ನಿಲ್ದಾಣದ ಬಳಿ ಏ 320 ಎನ್ನತಕ್ಕ ವಿಮಾನ ಅಪಘಾತಕ್ಕೆ ಈಡಾಗಿತ್ತು ಇದು ಆದಮೇಲೆ ಈ ದಿನ ಬೆಂಗಳೂರು ನಗರದ ಪಕ್ಕದಲ್ಲಿ ನಡೆದಿರತಕ್ಕ ವಿಮಾನ ಅಪಘಾತ ಇದಾಗಿದೆ. ಈ ವಿಮಾನ ವಾಯುದಳಕ್ಕೆ ಸೇರಿದಂತಹದ್ದಾಗಿದ್ದು ಈ 28 ಯುವಕರು ಮೃತರಾಗಿದ್ದಾರೆ. ಇದು ಮನಸ್ಸಿಗೆ ನೋವು ಆಗತಕ್ಕ ವಿಚಾರ. ನಾವು ಈ ಸಂದರ್ಭದಲ್ಲಿ ಆ ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಹೇಳತಕ್ಕ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ ಅವರ ಕುಟುಂಬವರ್ಗದವರಿಗೆ ಈ ಸದನದ ಸಂತಾಪದ ಜೊತೆಗೆ ಕರ್ನಾಟಕ ರಾಜ್ಯದ ಜನತೆಯ ಸಂತಾಪವನ್ನು ತಮ್ಮ ಮುಖಾಂತರ ವಾಯುದಳದ ಅಧಿಕಾರಿಗಳಿಗೆ ಒಂದು ಸಂತಾಪ ಸೂಚನೆಯನ್ನು ಕಳುಹಿಸಿಕೊಡೋಣ. ಅದನ್ನು ಅವರ ಕುಟುಂಬವರ್ಗದವರಿಗೆ ಅವರು ತಿಳಿಸಲಿ ಎನ್ನುವ ಆಸೆ ವ್ಯಕ್ತಮಾಡುತ್ತೇನೆ. ಅಲ್ಲಿನ ಎಲ್ಲಾ ಅಧಿಕಾರವರ್ಗದವರೂ ಬಹಳ ದುಃಖದಲ್ಲಿದ್ದಾರೆ. ಅವರು ಮೃತರ ಬಗ್ಗೆ ಬಹಳ ಅಭಿಮಾನದಿಂದ ಮಾತನಾಡುತ್ತಿದ್ದರು. ಮುಂದಿನ ತನಿಖೆ ಇತ್ಯಾದಿಗಳ ಬಗ್ಗೆ ಅವರಿಗೆ ಬಿಟ್ಟಿದ್ದು. ಅವರ ದುಃಖದಲ್ಲಿ ನಾವು ಎಲ್ಲರೂ ಭಾಗಿಯಾಗೋಣ. ಈ ಬಗ್ಗೆ ತಮ್ಮ ಮುಖಾಂತರ ಒಂದು ನಿರ್ಣಯ ಮಾಡಿ ಕಳುಹಿಸಿಕೊಡೋಣ ಎಂದು ಹೇಳುತ್ತೇನೆ. ಮತ್ತು ಎಲ್ಲರೀತಿಯ ಸಹಕಾರ ಕೊಟ್ಟು ವಿವರಗಳನ್ನು ಒದಗಿಸುವ ಬಗ್ಗೆ ಅತ್ಯಂತ ಪ್ರಾಮಾಣಿಕ ಪ್ರಯತ್ನ ಮಾಡಿ ದುರಂತ ನಡೆದಂತಹ ಸ್ಥಳಕ್ಕೂ ಕರೆದುಕೊಂಡು ಹೋದರು. ಇಷ್ಟು ಸಹಕಾರ ಕೊಟ್ಟದ್ದಕ್ಕೆ ವಿಚಾರ ತಿಳಿಸಿದ್ದಕ್ಕೆ ನಾನು ಸದನದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರ ದುಃಖದಲ್ಲಿ ನಾವೆಲ್ಲರೂ ಭಾಗಿಯಾಗುತ್ತೇವೆಂದು ಮತ್ತೊಮ್ಮೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri D.B.Chandra Gowda: I fully associate myself with the sentiments expressed by the Hon'ble Chief Minister and the leader of the House.

ತಾವು ಒಂದು ಕಂಡೋಲೆನ್ಸ್ ಮೆಸೇಜನ್ನು ಈ ಸದನದ ವತಿಯಿಂದ ಕೊಡುವುದಕ್ಕೆ ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ವತಿಯಿಂದ, ಸದನದ ವತಿಯಿಂದ, ಸಮಗ್ರ ಕರ್ನಾಟಕ ಜನತೆಯ ವತಿಯಿಂದ ಈ ಅಪಘಾತದಿಂದಾಗಿ ಸಂಕಟದಲ್ಲಿ ಸಿಕ್ಕಿರತಕ್ಕ ಎಲ್ಲರಿಗೂ ನಮ್ಮ ಹೃತ್ಪರ್ಷಿಯಾದಂತಹ ಸಂತಾಪವನ್ನು ಮತ್ತು ಈ ಸಂಕಟವನ್ನು ಸಹಿಸುವುದಕ್ಕೆ ಶಕ್ತಿಯನ್ನು ಭಗವಂತನು ಕುಟುಂಬದವರ್ಗದವರಿಗೆ ನೀಡಲಿ ಎಂದು ಹೇಳಿ ತಮ್ಮ ಮೂಲಕ ನನ್ನ ಸಂತಾಪವನ್ನು ವ್ಯಕ್ತಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ ಈ ರಾಜ್ಯದ ಆಸ್ತಿಯಂತಿದ್ದ ಯುವಶಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ಒಂದು ದುಃಖದಾಯಕ ಸಂದರ್ಭದಲ್ಲಿ ನಾನೂ ಕೂಡಾ ವೈಯಕ್ತಿಕವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಸಂತಾಪವನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಸಂಬಂಧಪಟ್ಟವರ ಕುಟುಂಬವರ್ಗದವರಿಗೆ ಸಾಕಷ್ಟು ಪರಿಹಾರವನ್ನು ಕೂಡಾ ಸರ್ಕಾರ ಹೆಚ್ಚಿನ ರೂಪದಲ್ಲಿ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಅತ್ಯಂತ ದುಃಖಕರವಾದ ಸಂಗತಿಯನ್ನು ಮಾನ್ಯ ಮುಖ್ಯಮಂತ್ರಿಯವರು ಮತ್ತು ವಿರೋಧಪಕ್ಷದ ನಾಯಕರು ಸಭೆಯ ಗಮನಕ್ಕೆ ತಂದಿದ್ದಾರೆ. ಹೃದಯವಿದ್ರಾವಕವಾದ ಈ ವಿಮಾನ ದುರ್ಘಟನೆ ಹಿಂದಿನ ವಿಮಾನ ದುರ್ಘಟನೆಯನ್ನು ಮರೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದ ಕಾಲದಲ್ಲಿ ಇದು ಮರುಕಳಿಸಿ ನಮ್ಮ ನಗರದಲ್ಲಿ ಆಗಿರತಕ್ಕದ್ದು ನಮ್ಮೆಲ್ಲರಿಗೂ ಕೂಡ ಹೃದಯವನ್ನು ಬಹಳ ಭಾರ ಮಾಡಿದೆ. 28 ಅರಳುವ ಪ್ರತಿಭೆಗಳನ್ನು ವಿಧಿ ಅಸ್ತಂಗತ ಮಾಡಿದೆ. ಇದು ನಮ್ಮ ದೇಶಕ್ಕೆ ತುಂಬಲಾರದ ನಷ್ಟವಾಗಿದೆ.

ವಿಮಾನ ಬಲಕ್ಕೆ ಇದೊಂದು ಭಾರಿ ಪೆಟ್ಟು ಹಾಗೆ ಎಂದು ಭಾವಿಸಲಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ತಂದೆ ತಾಯಿಗಳಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಸಾಂತ್ವನ ಮತ್ತು ಶಾಂತಿ ಸಮಾಧಾನ ಧೈರ್ಯಗಳು ಸಿಗಬೇಕು ಎನ್ನತಕ್ಕಂಥಾದ್ದು ಈ ಸದನದ ಹಾರೈಕೆ. ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಣೆ ಮಾಡಿ ಅವರಿಗೆ ಗೌರವ ಸಲ್ಲಿಸೋಣ.

(ಸಭೆಯು ಮೃತರ ಗೌರವಾರ್ಥ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು.)

1991-92ನೇ ಸಾಲಿನ ಆಯವ್ಯಯದ ಮೇಲೆ ಪಡೆದ ಸಾಮಾನ್ಯ ಚರ್ಚೆಗೆ-ಮುಖ್ಯಮಂತ್ರಿಗಳವರಿಂದ ಉತ್ತರ.

ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಉಪನಾಯಕರು ಹಾಗೂ ಆ ಕಡೆ ಮತ್ತು ಈ ಕಡೆ ಕುಳಿತಿರತಕ್ಕಂತಹ ಮಾನ್ಯ ಸದಸ್ಯರುಗಳು ಆಯವ್ಯಯ ಪತ್ರದ ಚರ್ಚೆಯಲ್ಲಿ ಭಾಗವಹಿಸತಕ್ಕಂತಹ ಕಾಲದಲ್ಲಿ ತಮ್ಮ ಅನಿಸಿಕೆಗಳನ್ನೂ ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಸಹಜವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕಂತಹ ಕಾಲದಲ್ಲಿ ಟೀಕೆ ಟಿಪ್ಪಣಿಗಳು ಬರತಕ್ಕಂತಹ ನಿರೀಕ್ಷೆಯನ್ನು ನಾವು ಮಾಡಬೇಕು. ನಾನು ಆ ಟೀಕೆ ಟಿಪ್ಪಣಿಗಳನ್ನು ಕೆಲವೊಮ್ಮೆ ನಮ್ಮ ಆಡಳಿತದ ಭವಿಷ್ಯದ ಚಿಂತನೆ ಮತ್ತು ಚೌಕಟ್ಟಿನಲ್ಲಿ ಸದುಪಯೋಗದ ದೃಷ್ಟಿಯಿಂದ ಅವು ಒಳ್ಳೆಯ ಮಾರ್ಗ ದರ್ಶನಗಳು ಎಂದು ನಾನು ಕರೆಯುತ್ತೇನೆ. ಆ ರೀತಿ ಕರೆದರೆ ತಪ್ಪಲ್ಲವೆಂದು ನನ್ನ ಭಾವನೆ. ಒಂದು ವಿಚಾರವನ್ನು ಸಮರ್ಥನೆ ಮಾಡಬೇಕಾದರೆ ಅಥವಾ ವಿರೋಧ ಮಾಡಬೇಕಾದರೆ, ವಿಷಯವನ್ನು ಪ್ರತಿಪಾದನೆ ಮಾಡಬೇಕಾದರೆ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂತಹ ಸಂದರ್ಭದಲ್ಲಿ ಕೆಲವೊಮ್ಮೆ ವಿರೋಧಪಕ್ಷದ ಸಾಲಿನಲ್ಲಿ ಕುಳಿತಿರತಕ್ಕಂತಹ ಮಾನ್ಯ ಸದಸ್ಯರುಗಳಷ್ಟೇ ಅಲ್ಲ ಈ ಕಡೆ ಕುಳಿತಿರತಕ್ಕಂತಹ ಮಾನ್ಯ ಸದಸ್ಯರುಗಳೂ ಕೂಡ ಇದು ಸರಿಯಲ್ಲ ಸರಿಯಾಗಿ ಆಗಬೇಕಾಗಿತ್ತು ಅಥವಾ ಇದು ಖಂಡನೀಯವೆಂದು ಹೇಳತಕ್ಕಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದು ತಪ್ಪು ಅಲ್ಲವೆಂದು ಹೇಳಿದ ಮೇಲೆ ವಿರೋಧಪಕ್ಷದ ಸಾಲಿನಲ್ಲಿ ಕುಳಿತಿರತಕ್ಕಂತಹ ಸದಸ್ಯರುಗಳು ಆ ರೀತಿಯಾದ ಒಂದು ವಿಚಾರವನ್ನು ಸಮರ್ಥನೆ ಮಾಡುವುದಕ್ಕೆ ಅಂದರೆ ನಾವು ಇಟ್ಟಿರತಕ್ಕಂತಹ ವಿಚಾರವನ್ನು ಸಮರ್ಥನೆ ಮಾಡುವುದಕ್ಕೆ ಸಾಧ್ಯವಾಗದೇ ವಿರೋಧವನ್ನು ವ್ಯಕ್ತಪಡಿಸಿದರೆ ಮತ್ತು ಆ ವಿರೋಧಕ್ಕೆ ಸಕಾರಣಗಳು ಇದ್ದರೆ, ಅದನ್ನು ಮೆಚ್ಚತಕ್ಕಂತಹ ಒಂದು ವಾದವನ್ನು ನಾವು ಮಾಡಬೇಕಾಗುತ್ತದೆ. ಅದನ್ನು ಮೆಚ್ಚಬೇಕಾಗುತ್ತದೆ. ಕಾರಣದ ಆಧಾರದ ಮೇಲೆ ವಾದವನ್ನು ಮಂಡನೆ ಮಾಡಿದಾಗ ಆ ವಾದಕ್ಕೆ ಪುಷ್ಟಿ ಕೊಡತಕ್ಕಂತಹ ಅಂಶಗಳ ಹಿನ್ನೆಲೆಯಲ್ಲಿ ನಾವು ಮೆಚ್ಚತಕ್ಕಂತಹ ವಿಚಾರಧಾರೆಯನ್ನು ಸರಕಾರದವರು ಇಟ್ಟುಕೊಂಡಿದ್ದೇನೆ. ಕಾರಣದ ಆಧಾರದ ಮೇಲೆ ಟೀಕೆ ಟಿಪ್ಪಣಿಗಳು ಬಂದರೆ ನಾವು ಸದಾ ಸ್ವಾಗತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸದನದ ಗಮನಕ್ಕೆ ತರುತ್ತಿದ್ದೇವೆ.

ಅದರ ಅರ್ಥ ವಿಷಯದ ಚರ್ಚೆಯ ಕಾಲದಲ್ಲಿ ಪ್ರತಿಪಾದನೆ ಮಾಡತಕ್ಕ ಕಾಲದಲ್ಲಿ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ವಿಷಯಗಳು ಈ ರೀತಿ ಬಂದಾಗ ನಾನು ವಿಷಯಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲತಕ್ಕ ಸದ್ವಿಚ್ಛೆಯಿಂದ ಆವೊಂದು ದೃಷ್ಟಿಯಿಂದ ಅವುಗಳನ್ನು ಪರಿಣಾಮಕಾರಿಯಾಗಿ ಮಾಡತಕ್ಕ ಒಂದು ವಿಚಾರಧಾರೆಯ ಹಿನ್ನೆಲೆಯಲ್ಲಿ ನಾನು ನನ್ನ ಉತ್ತರವನ್ನು ಕೊಡತಕ್ಕ ಪ್ರಯತ್ನ ಮಾಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಉಪನಾಯಕರು ಆದಿಯಾಗಿ ಆ ಕಡೆ ಈ ಕಡೆ ಮಾನ್ಯ ಸದಸ್ಯರು ಅದನ್ನು ಒಪ್ಪುತ್ತಾರೆ, ಮೆಚ್ಚುತ್ತಾರೆ ಎಂದು ನಾನು ಭಾವಿಸುತ್ತೇನೆ.